## ಶುಭ ಜನನ

ಚೆನ್ನೈನಲ್ಲಿರುವ ಬೆಳ್ಳೆ ಪ್ರವೀಣ್ ಹಾಗೂ ಶ್ರೀಮತಿ ಪೂರ್ಣಿಮಾ ದಂಪತಿಗಳಿಗೆ ತಾ.01-12-2007ರಂದು ಗಂಡು ಮಗುವಿನ ಜನನ

* * * * *

ಉಡುಪಿ ಚಿಟ್ಪಾಡಿಯಲ್ಲಿರುವ ಎಮ್. ಸಂತೋಷ್‌ರಾವ್ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳಿಗೆ ತಾ.15-12-2007ರಂದು ಗಂಡು ಮಗುವಿನ ಜನನ

* * * * *

ಬೆಂಗಳೂರಿನಲ್ಲಿರುವ ಶ್ರೀ ಅಜಿತ್ ಬೈಲಕೆರೆ ಮತ್ತು ಶ್ರೀಮತಿ ಮೀನಾಕ್ಷಿ ದಂಪತಿಗಳಿಗೆ ತಾ.06-01-2008ರಂದು ಗಂಡು ಮಗುವಿನ ಜನನ

## ಯೋಗ ತರಬೇತಿ ಶಿಬಿರ- ಸಮಾರೋಪ ಸಮಾರಂಭ

ಡಿ.16ರಂದು ಉಡುಪಿಯ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಯೋಗ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ನಡೆಯಿತು. ಹವ್ಯಕ ಸಭಾ, ಉಡುಪಿ ಇದರ ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯ ಭಟ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಯೋಗ ಮತ್ತು ಯೋಗ ಶಿಬಿರದ ಬಗ್ಗೆ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಸ್ವಾರಸ್ಯವಾಗಿ ತಿಳಿಸಿದರು. ಅತಿಥಿಗಳಾದ ಡಾ। ಎಸ್.ಎಲ್. ಕಾರ್ಣಿಕ್ ಮತ್ತು ಶ್ರೀಮತಿ ಶಂಕರಿ ಆರ್.ಭಟ್ ಯೋಗ ಅಭ್ಯಾಸದ ಮಹತ್ವವನ್ನು ವಿವರಿಸಿದರು. ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದರ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಹವ್ಯಕಸಭಾ ಉಡುಪಿ ಇದರ ಕಾರ್ಯದರ್ಶಿ ಹಾಗೂ ಯೋಗ ಗುರುಗಳಾದ ಶ್ರೀಮತಿ ಲೀಲಾಭಟ್ ವಂದಿಸಿದರು. ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಯೋಗ ವಿಭಾಗದ ಮುಖ್ಯಸ್ಥರಾದ ಡಾ। ಗಣಪತಿ ಜೋಯಿಸ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ನಿಧನ

### ಪಿ. ಶಿವಶಂಕರ್

ನಿವೃತ್ತ ಅಂಚೆ ಇಲಾಖಾ ಅಧೀಕ್ಷಕ ಶ್ರೀ ಪಿ. ಶಿವಶಂಕರ್‌ರವರು ತಾ.09-11-2007 ರಂದು ತಮ್ಮ 83ನೇ ವರ್ಷದಲ್ಲಿ ಮಂಗಳೂರಿನಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರ, ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ಕಡಬ ಅನಂತರಾವ್

ಕಡಬ ಅನಂತರಾವ್‌ರವರು ತಾ.20-11-07ರಂದು ತಮ್ಮ 78 ವರ್ಷ ಪ್ರಾಯದಲ್ಲಿ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ಕುಸುಮಾ ಜಿ. ರಾವ್

ಮಹಾರಾಷ್ಟ್ರದ ಕರಾಡದಲ್ಲಿ ವಾಸವ್ಯದಲ್ಲಿರುವ ಎಲ್ಲೂರು ಗೋವಿಂದರಾವ್ ಅವರ ಧರ್ಮಪತ್ನಿ ಕುಸುಮಾ ಜಿ. ರಾವ್ ಅವರು (58 ವರ್ಷ) ಅಲ್ಪಕಾಲದ ಅಸೌಖ್ಯದಿಂದ ತಾ.20-12-2007ರಂದು ಮಹಾರಾಷ್ಟ್ರದ ಸ್ವಗೃಹದಲ್ಲಿ ನಿಧನರಾದರು. ಮೃತರು ಇಬ್ಬರು ಗಂಡು, ಓರ್ವ ಹೆಣ್ಣು ಮಕ್ಕಳ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 14-01-2008 | ಮಕರ ಸಂಕ್ರಮಣ |
| 18-01-2008 | ಸ್ಮಾರ್ತಏಕಾದಶೀ |
| 19-01-2008 | ವೈಷ್ಣವ ಏಕಾದಶಿ |
| 20-01-2008 | ಪ್ರದೋಷಃ |
| 22-01-2008 | ಪೂರ್ಣಿಮಾ |
| 24-01-2008 | ಶ್ರವಣಾ ನಕ್ಷತ್ರಾರಂಭ |
| 25-01-2008 | ಸಂಕಷ್ಟ ಚತುರ್ಥೀ ಚಂದ್ರೋದಯ ರಾತ್ರಿ ಗಂ.9-06ಕ್ಕೆ |
| 02-02-2008 | ಸರ್ವೈಕಾದಶೀ |
| 04-02-2008 | ಪ್ರದೋಷಃ |
| 06-02-2008 | ಧನಿಷ್ಠಾ ನಕ್ಷತ್ರಾರಂಭ |
| 07-02-2008 | ಅಮಾವಾಸ್ಯೆ |
| 13-02-2008 | ಕುಂಭ ಸಂಕ್ರಮಣ |

## ಭೀಮರಥಿ ಶಾಂತಿ

ಯಕ್ಷಗಾನ ಶಿಲ್ಪಿ, ಕಲಾವಿದ ಅಡೂರು ಶ್ರೀಧರ ರಾಯರಿಗೆ ಭೀಮರಥಿ ಶಾಂತಿಯು ತಾ.23-12-2007ರಂದು ಆದಿತ್ಯವಾರ ಅಡೂರಿನಲ್ಲಿರುವ ಅವರ ಸ್ವಗೃಹ 'ಚಂದ್ರನಿವಾಸ' ಕೆರೆಮೂಲೆ ಮನೆಯಲ್ಲಿ ಅವರ ಪತ್ನಿ, ಮಕ್ಕಳು ಹಾಗೂ ಬಂಧುಗಳು ನೆರವೇರಿಸಿದರು.

ರಾತ್ರಿ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಬಾಲ ಪ್ರತಿಭಾ ಕಾರಂಜಿ ಕಾರ್ಯಕ್ರಮವಿತ್ತು. ನಂತರ ಡಾ। ರವಿ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಪ್ರದೀಪ್ ಕುಮಾರ್ ಕಲ್ಕೂರ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಡಾ। ಬಿ.ಸಿ.ಗೋಪಾಲಕೃಷ್ಣ ಭಟ್ ಅವರು ಅತಿಥಿಗಳಾಗಿ ಆಗಮಿಸಿದ್ದು ಭಾಗವತರಾದ ಶ್ರೀ ಗಣಪತಿ ಶಾಸ್ತ್ರಿ ಕುರಿಯ ಇವರಿಗೆ 'ದಾಸರ ಬೈಲು ಭಾಗವತ ಚನಿಯ ನಾಯ್ಕ ಪ್ರಶಸ್ತಿ'ಯನ್ನೂ, ಯಕ್ಷಗಾನ ಕಲಾವಿದ ಶ್ರೀ ಗಂಗಯ್ಯ ಶೆಟ್ಟಿ ಗೇರುಕಟ್ಟೆಯವರಿಗೆ 'ಕವಿ ಬಳಕಿಲ ಕೃಷ್ಣಯ್ಯ ಪ್ರಶಸ್ತಿ'ಯನ್ನೂ, ಯಕ್ಷಗಾನ ಶಿಲ್ಪಿ ಶ್ರೀ ಅಡೂರು ಶ್ರೀಧರ ರಾಯರಿಗೆ 'ಕಲ್ಕೂರ ಪ್ರತಿಷ್ಠಾನ ಪ್ರಶಸ್ತಿ'ಯನ್ನೂ ನೀಡಿದರು.

ರಾತ್ರಿ ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿಯವರಿಂದ ಸೇವೆಯಾಟವು ನೆರವೇರಿತು.

## ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ ಕಡಬ, ದ.ಕ.

ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದ 21ನೇ ಪ್ರತಿಷ್ಠಾವಾರ್ಷಿಕೋತ್ಸವವು ಇದೇ ಬರುವ ತಾರೀಕು 13-02-2008ನೇ ಬುಧವಾರ ರಥಸಪ್ತಮಿಯ ದಿನದಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಸಂದರ್ಭದಲ್ಲಿ ದೇವಳದ ವತಿಯಿಂದ ಉಪನಯನ ಹಾಗೂ ಮದುವೆ ಸಮಾರಂಭವನ್ನು ಉಚಿತವಾಗಿ ನಡೆಸಿಕೊಡಲಾಗುವುದೆಂದು ದೇವಳದ ಧರ್ಮದರ್ಶಿಗಳಾದ ಶ್ರೀ ಕೆ. ರಘುವೀರ ಶರ್ಮ ತಿಳಿಸಿರುತ್ತಾರೆ.

### ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತಿರುವ **ಸಾಮೂಹಿಕ ಗಣಹೋಮವು** ತಾ.25-01-2008ರಂದು ಮತ್ತು ಫೆಬ್ರವರಿ ತಿಂಗಳಲ್ಲಿ 24-02-2008ರಂದು ನಡೆಯಲಿದೆ. **ಗಣಹೋಮ ಸೇವಾ ಶುಲ್ಕ ರೂ.51/-** ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

- ಶ್ರೀಶಾರದಾ ದೇವಸ್ಥಾನ ವೇದಿಕೆ

ಶ್ರೀಶಾರದಾ ದೇವಸ್ಥಾನದಲ್ಲಿ ತಾ.09-02-2008ರ ಶನಿವಾರ ಸಂಜೆ ಗಂಟೆ 5-30ರಿಂದ

### ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

- ಶ್ರೀಶಾರದಾ ದೇವಸ್ಥಾನ ವೇದಿಕೆ

## ಅಭಿನಂದನೆ



### ಕಡಬ ಕುಂಭಾಟ್ ಗೋಪಾಲರಾವ್‌ರವರಿಗೆ ಧಾರ್ಮಿಕ ಸೇವೆಗಾಗಿ ರಾಷ್ಟ್ರಪ್ರಶಸ್ತಿ

ಶಿಕ್ಷಣ ಕ್ಷೇತ್ರ; ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹಲವಾರು ಪ್ರಶಸ್ತಿ, ಸನ್ಮಾನಗಳನ್ನು ಪಡೆದು ಸಮಾಜದಲ್ಲಿ, ನಾಡಿನಲ್ಲಿ ಗುರುತಿಸಿಕೊಂಡಿರುವ ಪ್ರಕೃತ ಕಡಬ ಶ್ರೀ ಶ್ರೀಕಂಠಸ್ವಾಮಿ, ಶ್ರೀ ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿರುವ ಕೆ. ಗೋಪಾಲರಾವ್ ಇವರಿಗೆ ಧಾರ್ಮಿಕ ರಂಗದಲ್ಲಿ ಸಲ್ಲಿಸಿದ ಸೇವೆಗಾಗಿ ರಾಷ್ಟ್ರಪ್ರಶಸ್ತಿ ಸಿಕ್ಕಿರುತ್ತದೆ. ಈ ಪ್ರಶಸ್ತಿಯನ್ನು ಕೇಂದ್ರ ಸರಕಾರದ ಸಹಯೋಗದಲ್ಲಿ ನಡೆಸಲ್ಪಡುವ ಗ್ರಾಮಾಂತರ ಪ್ರದೇಶಗಳ ಹಾಗೂ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ''ವಿಮೆನ್ ಎಂಡ್ ರೂರಲ್ ಡೆವಲಪ್ ಧಾರವಾಡ' ಸಂಸ್ಥೆಯವರು ದಿನಾಂಕ 29-12-2007ರಂದು ಧಾರವಾಡದಲ್ಲಿ ನಡೆದ ಸಮಾರಂಭದಲ್ಲಿ ಅಂತಾರಾಷ್ಟ್ರೀಯ ಮಕ್ಕಳ ತಜ್ಞ ಡಾ। ರಾಜನ್ ದೇಶಪಾಂಡೆ ಮತ್ತು ಧಾರವಾಡದ ಶಾಸಕ ಶ್ರೀ ಚಂದ್ರಕಾಂತ ಬೆಲ್ಲದ ಇವರ ಮೂಲಕ ಪ್ರಶಸ್ತಿ ಪ್ರದಾನ ಮಾಡಿದರು.

ಎಲ್ಲರ ಸಹಕಾರದಿಂದ ಪಾಳು ಬಿದ್ದಿದ್ದ ಬಿಳಿನೆಲೆ ಶ್ರೀ ಗೋಪಾಲಕೃಷ್ಣ ದೇವಾಲಯ; ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ; ಕಡಬ ಶ್ರೀ ಶ್ರೀಕಂಠಸ್ವಾಮಿ ಶ್ರೀಮಹಾಗಣಪತಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮೂಲ ಕಾರಣಕರ್ತರಾಗಿ, ಸಕ್ರಿಯವಾಗಿ ದುಡಿದು ಬ್ರಹ್ಮಕಲಶ ಕೂಡಾ ನೆರವೇರಿಸಿರುವ ಇವರ ಧಾರ್ಮಿಕ ಸೇವೆ ಸ್ಮರಣೀಯ.

ಇವರನ್ನು 1987 ಮತ್ತು 1996ರಲ್ಲಿ ಶೃಂಗೇರಿ ಶ್ರೀ ಶ್ರೀ ಜಗದ್ಗುರುಗಳು ಸನ್ಮಾನಿಸಿದ್ದರು. 1997ರಲ್ಲಿ ಇವರನ್ನು ಧಾರ್ಮಿಕ ಮತ್ತು ಸಮಾಜ ಸೇವೆಗಾಗಿ ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ಸ್ವಾಮೀಜಿಯವರೂ, 2006ರಲ್ಲಿ ಕಡಬದ ಬ್ರಹ್ಮಕಲಶ ಸಂದರ್ಭ ರಾಮಚಂದ್ರಾಪುರದ ಶ್ರೀ ಶ್ರೀ ಸ್ವಾಮೀಜಿಯವರೂ ಶಾಲು ಹೊದಿಸಿ ಸನ್ಮಾನಿಸಿದ್ದರು.

ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಸೇರಿದ ಪಾಳು ಬಿದ್ದಿರುವ ಬಳ್ಪ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ; ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಬ್ರಹ್ಮಕಲಶ ಸಮಿತಿಯ ಅಧ್ಯಕ್ಷರಾಗಿ ಇವರು ಆಯ್ಕೆಯಾಗಿದ್ದು ಕೆಲಸ ಕಾರ್ಯಗಳು ಪ್ರಾರಂಭವಾಗಿವೆ.

## ಮನವಿ

ಮಂಗಳೂರಿನ ವಿದ್ಯಾರಣ್ಯಪುರದಲ್ಲಿ ನಾಗದರ್ಶನ ಹೋಟೆಲ್ ನಡೆಸುತ್ತಿದ್ದ ಬಿ. ನಾಗರಾಜ ಹೆಬ್ಬಾರ್‌ರವರು ತಾ. 04-12-2007 ರಂದು ಅಘಾತದಲ್ಲಿ ನಿಧನರಾಗಿರುವರು.. ಕುಂದಾಪುರ ತಾಲೂಕು ಬೀಜೂರು ಗ್ರಾಮದ ವತಾರ ಪಾಂಡೇಶ್ವರ ರಾಮಕೃಷ್ಣ ರಾಯರ ಮಗನಾದ ಮೃತರು ಶ್ರಮ ಜೀವಿಯಾಗಿದ್ದು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿರುತ್ತಾರೆ. ಮಕ್ಕಳಿಬ್ಬರಿಗೂ ಬೆಂಗಳೂರಿನ ಸ್ಥಾನಿಕ ಸಂಘವು ಧನ ಸಹಾಯ ನೀಡಿ ವಿದ್ಯಾಭ್ಯಾಸ ಮುಂದುವರೆಯಲು ಕಾರಣವಾಗಿದೆ. ಮೃತರ ನೂತನ ಗೃಹ ಪ್ರವೇಶವು ತಾ. 07-12-2007 ರಂದು ನೆರವೇರಬೇಕಾಗಿದ್ದು, ಇದೀಗ ಅವರ ಮರಣದಿಂದ ಕುಟುಂಬವು ಅಂಧಕಾರದಲ್ಲಿ ಮುಳುಗುವಂತಾಗಿದೆ. ನಮ್ಮ ಸಮಾಜದ ಬಂಧುಗಳಾದ ದಿವಂಗತರ ಮನೆ ಸಾಲ, ಗೃಹ ಪ್ರವೇಶ ಮೊದಲಾದ ಕೆಲಸ ಕಾರ್ಯಗಳಿಗೆ ಅತೀವ ಹಣದ ಅಭಾವ ಕಾರಣವಾಗಿದೆ.

ಆದ್ದರಿಂದ ಸಹೃದಯ ಸಮಾಜ ಬಾಂಧವರು ಈ ಕುಟುಂಬಕ್ಕೆ ಧನ ಸಹಾಯ ನೀಡಬೇಕೆಂದು ದಿವಂಗತರ ಸಂಸಾರವು ವಿನಂತಿಸಿಕೊಂಡಿದೆ.

ಆಸಕ್ತ ಸಮಾಜ ಬಾಂಧವರು ನೀಡುವ ಸಹಾಯ ಧನವನ್ನು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿಯವರಿಗೆ ಡಿ.ಡಿ. ಚೆಕ್ ಅಥವಾ ನಗದು ರೂಪದಲ್ಲಿ ಕಳುಹಿಸಿದಲ್ಲಿ (ಸೂಕ್ತ ರಶೀದಿ ನೀಡಲಾಗುವುದು) ನಾವು ಅದನ್ನು ಒಟ್ಟುಸೇರಿಸಿ ಅವರ ಮೃತರ ಕುಟುಂಬಕ್ಕೆ ಪಾವತಿಸಲು ಸಾಧ್ಯವಾಗುತ್ತದೆ.

-ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು

## ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ಜ್ಯೋತಿಷ್ಯ ಸಲಹಾಕೇಂದ್ರ

ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತೀ ತಿಂಗಳ ಸಂಕಷ್ಟಹರ ಚತುರ್ಥಿಯಂದು ಸಾಮೂಹಿಕ ಗಣಯಾಗವನ್ನು ಶ್ರೀ ನಾಗಭೂಷಣ ಶಾಸ್ತ್ರಿಕಿಗ್ಗ ಇವರು ನೆರವೇರಿಸುತ್ತಾರೆ. ಅಲ್ಲದೆ ಬೆಳಿಗ್ಗೆ ಗಣಹೋಮದ ನಂತರ ಸಂಜೆ 5-00 ಗಂಟೆಯವರೆಗೆ ಶ್ರೀ ದೇವಸ್ಥಾನದಲ್ಲಿದ್ದು ಜ್ಯೋತಿಷ್ಯ, ಮಂಗಲ ಮುಹೂರ್ತ ಮೊದಲಾದ ವಿಷಯಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲು ಲಭ್ಯವಿದ್ದಾರೆ.

ಮುಂಡ್ಕೂರು ಕೋರಿಕೆಬೆಟ್ಟು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಅರ್ಚಕರಾದ ನಾಗಭೂಷಣ ಶಾಸ್ತ್ರಿಯವರು ಜ್ಯೋತಿಷ್ಯದ ಬಗ್ಗೆ ಸಾಕಷ್ಟು ಅನುಭವವನ್ನು ಹೊಂದಿದ್ದು ಆಸಕ್ತರು ದೇವಸ್ಥಾನಕ್ಕೆ ಆಗಮಿಸಿ ಈ ಸೌಲಭ್ಯದ ಸದುಪಯೋಗವನ್ನು ಪಡೆದುಕೊಳ್ಳಬಹುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ದ ಪ್ರಕಟಣೆ ತಿಳಿಸಿದೆ.

ಉಡುಪಿ ವಿಶಿಷ್ಟ ರುಚಿಯುಳ್ಳ
**Rao's 'ಮಾತೃಛಾಯಾ'ರವರ**
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
**ಭಾರತ್ ಸ್ಟೋರ್ಸ್**
ರಥಬೀದಿ, ಉಡುಪಿ - 576 101. ಫೋನ್ : 2522444